ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.--ಎಷ್ಟುಹಣ ವಸೂಲಾಗಬೇಕೆಂಬುದನ್ನು ನಿರ್ಧರ ಮಾಡಿಕೊಳ್ಳದೆ ಅಧಿಕಾರಿಗಳನ್ನು ನೇಮಕ ಮಾಡಬಾರದೆಂದು ನಾನು ಇಲ್ಲಗೆ 2 ವರ್ಷಗಳ ಹಿಂದೆ ಇದೇ ಸಭೆಯಲ್ಲ ತಿಳಿಸಿದ್ದೆ. ಹೀಗೆ ಅನಾವಶ್ಯಕವಾದ ವೆಚ್ಚವನ್ನು ತಪ್ಪಿಸಲು ಸರ್ಕಾರವೇನು ಕ್ರಮವನ್ನು ಕೈಗೊಂಡಿದೆ ?

ಶ್ರೀ ಎಸ್. ನಿಜಲಿಂಗಪ್ಪ.—ಅದನ್ನು ಅವಾಯ್ಡ ಮಾಡುವುದಕ್ಕಾಗೇ ಆಕ್ಟ್‌ನ್ನು ತಿದ್ದುಪಡಿ ಮಾಡುವುದು.

Sri V. S. PATIL.—In regard to framing of the rules, for the implementation of the Act, I think the Secretariat is quite able to do it. Why a special branch was created in all these districts ?

Sri S. NIJALINGAPPA.—Because it is a special kind of work and the previous Act contemplated recovery based on the amount of produce per acre. That was I think an unpractical step which created difficulties. Therefore we felt it necessary to amend the Act.

Levying of Surcharge or Stamp Duty on the Registration of Documents.

*Q.—204. **Sri V. MASIYAPPA** (Hiriyur).—

Will the Government be pleased to state :—

(*a*) whether most of the Taluk Development Boards are levying a surcharge or Stamp duty on the Registration of documents in the Sub-Registrar's Offices ;

(*b*) whether the amounts collected on this account are being transferred to the Taluk Boards regularly immediately at the end of the quarters ?

A.—**Sri RAMAKRISHNA HEGDE** (Minister for Development, Panchyat Raj and Co-operation).—

(*a*) Yes.

(*b*) Yes, generally.

ಶ್ರೀ ವಿ. ಮಸಿಯಪ್ಪ.—ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ಸಾಮಾನ್ಯವಾಗಿ ವರ್ಗಾಯಿಸ ರಾಗುತ್ತಿದೆ ಎಂಬುದಾಗಿ ಹೇಳಿದೆ. ನಮ್ಮ ಅನುಭವ ಇರತಕ್ಕದ್ದು ಆಯಾ ಕ್ವಾರ್ಟರ್ ಎಂಡ್ ನಲ್ಲಿ ಈ ಬಗ್ಗೆ ವಸೂಲಾದ ಪೂರ್ತಿ ತಾಲ್ಲೂಕು ಮಂಡಲಗೆ ವರ್ಗಾವಣೆಯಾಗುವುದಕ್ಕೆ ಸಾಕಷ್ಟು ಪ್ರಯತ್ನಗಳು ನಡೆಯುತ್ತಾ ಇಲ್ಲ. ಅದರಿಂದ ತಾಲ್ಲೂಕು ಬೋರ್ಡುಗಳಿಗೆ ಹಣಕಾಸಿನ ವಿಷಯ ದಲ್ಲಿ ಬಹಳ ತೊಂದರೆಯಾಗಿದೆ ಎಂಬುದಾಗಿ ನನ್ನ ಗಮನಕ್ಕೆ ಬಂದಿದೆ. ಅದನ್ನು ಸರ್ಕಾರದವರು ಪರಿಶೀಲನೆಮಾಡಿ ಜಾಗ್ರತೆಯಾಗಿ ವಸೂಲಾದ ಪೂರ್ತಿಹಣವನ್ನು ತಾಲ್ಲೂಕು ಮಂಡಲಗೆ ವರ್ಗಾಯಿ ಸುವುದಕ್ಕೆ ತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತೀರಾ?

† ಶ್ರೀ ರಾಮಕೃಷ್ಣ ಹೆಗ್ಗಡೆ.—ತೆಗೆದುಕೊಳ್ಳುತ್ತೇವೆ.

Mr. **SPEAKER.**—Question hour is over.